# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 6-8-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಸೋಯಾಬೀನ್ ಎಣ್ಣೆ ಆಮದು ಇಮ್ಮಡಿ(2022 ಜುಲೈ)

ಜುಲೈ ತಿಂಗಳಲ್ಲಿ ಭಾರತದ ಸೋಯಾಬೀನ್ ಎಣ್ಣೆ ಆಮದು ಹಿಂದಿನ ತಿಂಗಳಿಗಿಂತ ಇಮ್ಮಡಿಯಾಗಿದೆಯೆನ್ನಲಾಗಿದೆ. ರಿಫೈನರಿಗಳು ಕರರಹಿತ ಆಮದಿನ ಲಾಭ ಪಡೆಯಲು ಹೆಚ್ಚು ಸೋಯಾಬೀನ್ ಎಣ್ಣೆ ಆಮದು ಮಾಡುತ್ತಿದೆಯೆನ್ನಲಾಗಿದೆ. ಇದರಿಂದ ಅಮೇರಿಕಾ ಸೋಯಾಎಣ್ಣೆ ಬೆಲೆ ನಿರುತ್ತೇಜಿಸಲ್ಪಡಲಿದೆ ಹಾಗೂ ಉತ್ಪಾದಕ ದೇಶಗಳಾದ ಇಂಡೋನೇಶಿಯಾ ಹಾಗೂ ಮಲೇಶಿಯಾ ಹೆಚ್ಚಿನ ರಫ್ತಿಗಾಗಿ ಸ್ಪರ್ಧಾತ್ಮಕ ದರಕ್ಕೆ ಹಾಗೂ ದರ ಇಳಿಕೆಯ ಮೂಲಕ ಪ್ರಯತ್ನಿಸಬೇಕಾಗಬಹುದು. ಜುಲೈ ತಿಂಗಳ ಭಾರತದ ಸೋಯಾಬೀನ್ ಎಣ್ಣೆ ಆಮದು 113 ಶೇಕಡಾ ಹೆಚ್ಚಳಗೊಂಡು 493,000 ಟನ್‌ಗಳಿಗೇರಿದೆಯೆನ್ನಲಾಗಿದೆ.

### ಸೋಯಾಬೀನ್ ದರ ಇಳಿಕೆ

ಸೋಯಾಬೀನ್ ದರ ಕ್ವಿಂ. ಗೆ ರೂ 100 ಇಳಿಕೆಯಾಗಿದ್ದು ಆವಕ ಸ್ಥಿರವಿದೆ. ಜಾಗತಿಕ ಪಾಮೆಣ್ಣೆ ಉತ್ಪಾದನಾ ಹೆಚ್ಚಳವಾಗುವ ಸಾಧ್ಯತೆಯಿಂದ ಅದರ ದರ ಇನ್ನೂ ಇಳಿಕೆಯಾಗುವ ನಿರೀಕ್ಷೆಯಿದೆ. ಕೆಲಸಗಾರರ ಲಭ್ಯತೆ ಹೆಚ್ಚಳದಿಂದ ಮಲೇಶ್ಯಾದ ಪಾಮೆಣ್ಣೆ ಉತ್ಪಾದನೆ ಹೆಚ್ಚಳವಾಗಲಿದೆಯೆನ್ನಲಾಗಿದೆ. ಇದರಿಂದ ಸೋಯಾಬೀನ್ ದರವೂ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ.

### ಕಲಬೆರೆಕೆ ಖಾದ್ಯತೈಲ ಖರೀದಿ, ಮಾರಾಟಗಳಲ್ಲಿ ಭಾಗಿಯಾಗದಂತೆ SEA ಯಿಂದ ಎಚ್ಚರಿಕೆ

ಕೆಲವೊಂದು ಕಂಪೆನಿಗಳು ಗ್ಲಿಸರಿನ್ ಬೆರೆಸಿದ ಖಾದ್ಯತೈಲ, ಕಚ್ಚಾ ಖಾದ್ಯತೈಲ ಮಾರಾಟ, ತಯಾರಿಗಳಲ್ಲಿ ಭಾಗಿಯಾಗುತ್ತಿರುವ ಸಾಧ್ಯತೆಯಿರುವುದರಿಂದ, ಅವುಗಳ ಖರೀದಿ ಮತ್ತು ತಯಾರಿ ಮಾರಾಟಗಳಲ್ಲಿ ಭಾಗಿಯಾಗದಂತೆ ಮತ್ತು ಅವುಗಳ ಸಂಪರ್ಕ ಜಾಲಗಳ ಭಾಗಿಯಾಗದಂತೆ ಮತ್ತು ಸದಸ್ಯರಿಗೆ ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್(SEA) ಯ ಅಧ್ಯಕ್ಷ ಅತುಲ್ ಚತುರ್ವೇದಿಯವರು ಎಚ್ಚರಿಕೆ ನೀಡಿದ್ದಾರೆನ್ನಲಾಗಿದೆ. ಪಾಮ್ ಪ್ಯಾಟಿಆಸಿಡ್ ಗ್ಲಿಸರಿನ್ ಹಾಗೂ ರೈಸ್ ಪ್ಯಾಲಿ ಆಸಿಡ್+ಗ್ಲಿಸರಿನ್ ಸೇರಿಸಿ ಸಿಂಥೆಟಿಕ್ ಎಣ್ಣೆ ತಯಾರಿಯಲ್ಲಿ ಚಟುವಟಿಕೆಯ ಜಾಲ ವ್ಯಾಪಕವಾಗಿದೆಯೆನ್ನಲಾಗಿದೆ. ಖಾದ್ಯತೈಲ ಉತ್ಪಾದಕರು ಮಾರಾಟಗಾರರು ಎಚ್ಚರಿಕೆ ವಹಿಸಬೇಕಾಗಿದೆಯೆನ್ನಲಾಗಿದೆ. ಈ ವಿಚಾರ FSSAI(FOOD SAFETY AND STANDARDS AUTHORITY OF INDIA) ಗಮನಿಸುತ್ತಿದ್ದು, ಕಣ್ಗಾವಲನ್ನು ಹೆಚ್ಚಿಸಲಿದೆಯೆನ್ನಲಾಗಿದೆ.

### ಜುಲೈ ತಿಂಗಳ ಅಂತ್ಯದ ಮಲೇಶಿಯನ್ ಪಾಮೆಣ್ಣೆ ದಾಸ್ತಾನು 8 ತಿಂಗಳ ಗರಿಷ್ಠ ಮಟ್ಟಕ್ಕೆ ಸಾಧ್ಯತೆ

ರಾಟರ್ಸ್ ಸರ್ವೇ ಪ್ರಕಾರ ಜುಲೈ 2022 ಅಂತ್ಯದ ಮಲೇಶೀಯನ್ ಪಾಮೆಣ್ಣೆ ಇನ್‌ವೆಂಟರಿ ದಾಸ್ತಾನು ಹಿಂದಿನ 8 ತಿಂಗಳಲ್ಲೇ ಗರಿಷ್ಠ ಮಟ್ಟಕ್ಕೇರಲಿದೆಯೆನ್ನಲಾಗಿದ್ದು 1.79 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ಉತ್ಪಾದನೆಯೂ ನವೆಂಬರ್ 2022 ರ ನಂತರ ಗರಿಷ್ಠ ಮಟ್ಟ ತಲುಪಿದ್ದು 1.58 ಮಿಲಿಯನ್ ಟನ್ ಗಳಾಗಿದೆಯೆಂದು ಅಂದಾಜಿಸಲಾಗಿದೆಯೆನ್ನಲಾಗಿದೆ.

### ಏಶ್ಯಾದ ಪ್ರಮುಖ ದೇಶಗಳಲ್ಲಿ ಅಕ್ಕಿ ಉತ್ಪಾದನೆ ಇಳಿಕೆ ಸಾಧ್ಯತೆ

ಏಶ್ಯಾದ ಪ್ರಮುಖ ಅಕ್ಕಿ ಉತ್ಪಾದಕ ದೇಶಗಳಾದ ಭಾರತ, ಚೀಣಾ,ಬಾಂಗ್ಲಾದೇಶ ಮತ್ತು ವಿಯೆಟ್ನಾಂ ಗಳಲ್ಲಿ ಈ ವರ್ಷ ಅಕ್ಕಿ ಉತ್ಪಾದನೆ ಇಳಿಕೆ ಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಭಾರತದಲ್ಲಿ ಅನಿಯಮಿತ, ಮಳೆಯಿಂದಾಗಿ ಈಗಾಗಲೇ ಸಾಟಿ ಪ್ರದೇಶ ಇಳಿಕೆಯಾಗಿದ್ದು, ಬಾಂಗ್ಲಾದೇಶ ನೆರೆಯಿಂದ ಭಾದಿತವಾಗಿದೆ. ಚೀನಾದಲ್ಲಿ ಬಿಸಿಗಾಳಿಯ ಹಾವಳಿ ಹಾಗೂ ವಿಯೆಟ್ನಾಂದಲ್ಲಿ ಗುಣಮಟ್ಟದ ಹಾನಿ ಇತ್ಯಾದಿಗಳಿಂದ ಉತ್ಪಾದನೆ ಬಾದಿತವಾಗಲಿದೆಯೆನ್ನಲಾಗಿದೆ. ಈ ಪ್ರಮುಖ ದೇಶಗಳಲ್ಲಿ ಜಾಗತಿಕ ಉತ್ಪಾದನೆಯ 90 ಶೇಕಡಾ ಅಕ್ಕಿ ಉತ್ಪಾದನೆಯಾಗುತ್ತದೆಯೆನ್ನಲಾಗಿದೆ. ಜಾಗತಿಕ ಆಹಾರ ಭದ್ರತೆ ಹಾಗೂ ಆಹಾರ ಹಣದುಬ್ಬರ ದರ ಇದರಿಂದ ಬಾಧಿತವಾಗುವ ಸಾಧ್ಯತೆಗಳಿವೆ. ಹಿಂದಿನೆರಡು ವರ್ಷಗಳಲ್ಲಿ ಭಾರತ ದಾಖಲೆ ಅಕ್ಕಿ ಉತ್ಪಾದನೆ ಮಾಡಿತ್ತು ಮತ್ತು ಸಾಕಷ್ಟು ದಾಸ್ತಾನು ಹೊಂದಿದೆ. ಚೀನಾ ದೇಶದಲ್ಲಿ ಅಕ್ಕಿ ಉತ್ಪಾದನೆ ಇಳಿಕೆಯಾಗಿ 2022-23ರಲ್ಲಿ 6 ಮಿಲಿಯನ್ ಟನ್ ಅಕ್ಕಿ ಆಮದು ಮಾಡಬೇಕಾಗಬಹುದೆಂದು USDA ನಿರೀಕ್ಷಿಸಿದೆಯೆನ್ನಲಾಗಿದೆ.